ಕರ್ನಾಟಕ ಸರ್ಕಾರ
ಸಾರ್ವಜನಿಕ ಶಿಕ್ಷಣ ಇಲಾಖೆ

# ಚಿತ್ರಕಲಾ ಶಿಕ್ಷಣ

NCF – 2005 ಆಧಾರಿತ ಸಹಪಠ್ಯ ವಿಷಯ

# ಪಠ್ಯವಸ್ತು

2012–2013

ಒಂದರಿಂದ ಹತ್ತನೆಯ ತರಗತಿಯವರೆಗೆ


## ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ನಿರ್ದೇಶನಾಲಯ.

ನಂ. 4, 100 ಅಡಿ ವರ್ತುಲ ರಸ್ತೆ ಬನಶಂಕರಿ 3ನೆಯ ಹಂತ, ಬೆಂಗಳೂರು – 560 0085

# ಮುನ್ನುಡಿ

ಸಾಮಾಜಿಕ ಹಾಗೂ ರಾಷ್ಟ್ರೀಯ ಆಶೋತ್ತರಗಳು ಬದಲಾಗುತ್ತಿರುವ ಈ ಸಂದರ್ಭದಲ್ಲಿ ಶಿಕ್ಷಣ ಕ್ರಮವು ಅವುಗಳಿಗೆ ಸಕಾರಾತ್ಮಕವಾಗಿ ಸ್ಪಂದಿಸುವುದು ಪ್ರಗತಿಯ ಲಕ್ಷಣ. ಈ ಸಂದರ್ಭದಲ್ಲಿ ಕಲಾ ಶಿಕ್ಷಣದಲ್ಲಿ ಸೂಕ್ತ ಬದಲಾವಣೆಗಳನ್ನು ತರುವ ದಿಕ್ಕಿನಲ್ಲಿ ಕಲಿಕಾ ಭಾರವನ್ನು ಕಡಿಮೆ ಮಾಡುವ ಯಶಪಾಲ್ ಸಮಿತಿಯ ಶಿಫಾರಸ್ಸುಗಳನ್ವಯ ಹಾಗೂ NCF – 2005 ಮಾಡಿರುವ ಶಿಫಾರಸ್ಸುಗಳ ಆಧಾರದಲ್ಲಿ ಕರ್ನಾಟಕ ಸರ್ಕಾರವು ನೂತನ ಪಠ್ಯವಸ್ತು ಜಾರಿಗೆ ತಂದಿದೆ.

"NCF – 2005" ಪಠ್ಯ ವಸ್ತುವಿನಲ್ಲಿ ಒತ್ತಿ ಹೇಳಿದ ಸಾಮಾನ್ಯ ಅಂಶಗಳು ಇದರಲ್ಲಿ ಆಧಾರವಾಗಿದೆ. ವ್ಯವಸ್ಥಿತ ಬದಲಾವಣೆ, ಜ್ಞಾನದ ಅಭಿವೃದ್ಧಿಗೆ ಕಲಿಕಾ ಅನುಭವ ಬಳಸುವುದು. ಸಂತಸದ ಕಲಿಕೆ, ಜ್ಞಾನ ಸಂಯೋಜನೆ, ಆಯಾಕಟ್ಟಿನಲ್ಲಿ ಸಮಸ್ಯೆಗಳ ಪರಿಹಾರ, ಪ್ರಸ್ತುತ ಹಾಗೂ ಮುಂಬರುವ ದಿನಗಳಲ್ಲಿನ ಬೇಕುಗಳಿಗೆ ಶಿಕ್ಷಣವನ್ನು ರೂಪಿಸುವುದು. 8ನೇ ತರಗತಿಯ ನಂತರ ಉದ್ಯೋಗಾವಕಾಶಗಳನ್ನು ಕಲ್ಪಿಸುವುದು. ಮೌಲ್ಯಮಾಪನದ ವಿಧಾನ ಹಾಗೂ ಪರಿಣಾಮಗಳಿಗೆ ಗಮನ ಕೊಡುವುದು.

ಮಕ್ಕಳಿಂದಲೇ ಜ್ಞಾನವನ್ನು ಅಭಿವೃದ್ಧಿಪಡಿಸುವುದು. ಹೀಗೆ ವಿದ್ಯಾರ್ಥಿಗಳ ಅವಶ್ಯಕತೆ ಹಾಗೂ ಸಾಮರ್ಥ್ಯಗಳಿಗೆ ಪ್ರಾಮುಖ್ಯತೆ ನೀಡಲಾಗಿದೆ.

ರಾಜ್ಯ ನೂತನ ಪಠ್ಯಕ್ರಮ ಆಧರಿಸಿ ಈ ನೂತನ ಪಠ್ಯವಸ್ತುವನ್ನು ತಯಾರಿಸಲಾಗಿದೆ. ವಿದ್ಯಾರ್ಥಿಗಳ ಕಲಿಕೆಗೆ ಹೆಚ್ಚು ಅವಕಾಶಗಳನ್ನು ಕಲ್ಪಿಸಲು ವಿವಿಧ ವಿಧಾನಗಳನ್ನು ಈ ನೂತನ ಪಠ್ಯ ವಸ್ತುವಿನಲ್ಲಿ ಅಳವಡಿಸಲಾಗಿದೆ. ಅಂತರ್ಗತ ವಿಧಾನ (Integrated Approach), ರಚನಾತ್ಮಕ ವಿಧಾನ (Constructive Approach) ಸುರುಳಿಯಾಕಾರದ ಪ್ರಸ್ತುತತೆ (Spiral Approach) ಕಲಿಕಾ ಅನುಭವಗಳನ್ನು ಹೊಸ ಪರಿಸರದಲ್ಲಿ ಅನ್ವಯಿಸಿ ಸಮಸ್ಯೆ ಬಿಡಿಸುವ ಕೌಶಲಗಳ ಬೆಳವಣಿಗೆಗೆ ಆದ್ಯತೆ ನೀಡಲಾಗಿದೆ.

ಚಿತ್ರಕಲೆಯು ಶೈಕ್ಷಣಿಕ ಕ್ಷೇತ್ರದಲ್ಲಿಯೇ ಸ್ಪರ್ಷಮಣಿಯ ಹಾಗೆ ತಿಳಿಯಲೆತ್ನಿಸುವವರ, ಅರ್ಥೈಸುವವರ, ಅಭಿವ್ಯಕ್ತಿಸುವವರ ಮೌಲ್ಯವನ್ನು, ಕೌಶಲವನ್ನು, ಪ್ರತಿಭೆಯನ್ನು ಅವಲಂಭಿಸಿ, ಚಿತ್ರಕಲೆಯೆಂಬುದು ಮೂರ್ತರೂಪದಲ್ಲಿ ಗೋಚರಿಸುತ್ತದೆ, ಬೆಳಕಾಗುತ್ತದೆ, ಜೊತೆಗೆ ಕಾಲಕಾಲಕ್ಕೆ ಸಮಾಜದ ಅಭಿವೃದ್ಧಿಯಲ್ಲಿ ಆಗುವ ಬದಲಾವನೆಯ ಅವಶ್ಯಕತೆಯನ್ನು ಪೂರೈಸುವ ಕ್ಷೇತ್ರವಾಗಿರುವುದರಿಂದ ಇತ್ತ ಗಮನ ಹರಿಸುವುದು ಅವಶ್ಯಕತೆಯಿದೆ.

ಕಲೆಯೆಂಬುದು ಸೀಮಿತ ಚೌಕಟ್ಟಿನಲ್ಲಿ ನೋಡ ಹೊರಟರೆ ತೀರ ಚಿಕ್ಕದೆನಿಸಿ ಅರ್ಥವ್ಯಾಪ್ತಿಯ ಸರ್ವಾಂಗೀಣ ಬೆಳವಣಿಗೆಗೆ ಪೂರಕವಾದ ಚಟುವಟಿಕೆಗಳಿಗೆ ಆದ್ಯತೆ ನೀಡಬೇಕಾಗಿರುವುದು ಬಹಳ ಮುಖ್ಯ. ಅದಕ್ಕಾಗಿ "ಎನ್. ಸಿ. ಎಫ್. – 2005" ರಲ್ಲಿ ಹೇಳಿದಂತೆ ಪ್ರಾಥಮಿಕ ಹಂತದಿಂದ ಶಿಕ್ಷಣದಲ್ಲಿ ಮಗುವನ್ನು ಭೌತಿಕವಾಗಿ, ಭಾವನಾತ್ಮಕವಾಗಿ, ಕ್ರಿಯಾತ್ಮಕವಾಗಿ, ಕೌಶಲ ಪೂರಿತವಾಗಿ ರೂಪಿಸುವಲ್ಲಿ ಚಿತ್ರಕಲೆಯು ಸಹಕಾರಿಯಾಗಿದೆ. ಈ ಪಠ್ಯವಸ್ತುವಿನಲ್ಲಿ ನೂತನವಾಗಿ

5ನೇ ತರಗತಿಯಿಂದ ಪ್ರೌಢ ಹಂತದವರೆಗೆ ಚಿತ್ರಕಲಾ ಶಾಸ್ತ್ರ ಮತ್ತು ಕಂಪ್ಯೂಟರ್ ತಂತ್ರಜ್ಞಾನ ವಿಷಯವು ತರಗತಿಗಳಿಗೆ ಅನುಗುಣವಾಗಿ ಅಧ್ಯಯನಕ್ಕೆ ಅನುಸರಿಸಿ ಸೇರಿಸಲಾಗಿದೆ.

ಚಿತ್ರಕಲೆ ಮಕ್ಕಳಿಗೆ ಭಾವನೆಯನ್ನು ವ್ಯಕ್ತಪಡಿಸಲು, ಆಲೋಚನೆಗಳನ್ನು ಅನ್ವೇಷಿಸಲು, ವೀಕ್ಷಣೆಗಳನ್ನು ದಾಖಲಿಸಲು, ವಸ್ತುಗಳೊಂದಿಗೆ ಪ್ರತ್ಯಕ್ಷವಾಗಿ ಅನುಭವ ಪಡೆಯಲು ಅವಕಾಶವನ್ನು ಒದಗಿಸಿಕೊಡುತ್ತದೆ. ಚಿತ್ರಕಲೆಯನ್ನು ಪ್ರತ್ಯೇಕವೆಂದು ನೋಡಲಾಗಿಲ್ಲ. ಅದು ಕ್ರಿಯಾತ್ಮಕವಾಗಿ ಕಲಿಯುವ ಮತ್ತು ಪರಸ್ಪರ ಹಂಚಿಕೊಳ್ಳುವ ವಿಧಾನವಾಗಿದೆ. ಈ ಚಟುವಟಿಕೆಗಳೂ ಎಲ್ಲಾ ಮಕ್ಕಳೂ ಭಾಗವಹಿಸಿ ಮತ್ತು ಕ್ರಮಬದ್ಧ ಪಠ್ಯ ವಿಷಯಗಳಾದ ಭಾಷೆ, ಗಣಿತ ಮತ್ತು ವಿಜ್ಞಾನ, ಸಮಾಜ ವಿಜ್ಞಾನ ಅಧ್ಯಯನವನ್ನು ಶ್ರೀಮಂತ ಗೊಳಿಸುವಂತೆ ವಿನ್ಯಾಸಗೊಳಿಸಲಾಗಿದೆ.

ಮಗುವು ಜ್ಞಾನೇಂದ್ರಿಯಗಳ ಮೂಲಕವೇ ಭೌತಿಕ ಪ್ರಪಂಚದ ಬಗ್ಗೆ ಪ್ರತ್ಯಕ್ಷವಾಗಿ ಅನುಭವ ಪಡೆಯುತ್ತದೆ. ಮತ್ತು ಇಂದ್ರಿಯಾನುಭವಗಳಿಗೆ ಪಠ್ಯವಸ್ತುವಿನಲ್ಲಿ ಪ್ರಮುಖ ಸ್ಥಾನವನ್ನು ಕೊಡಲಾಗಿದೆ. ಒಂದು ಹೊಸ ಪ್ರಯೋಗ ಮಾಡಲಾಗಿದೆ. ಮಗುವಿಗೆ ವಿವಿಧ ಸಂದರ್ಭದಲ್ಲಿ ಅವರ ಚಿಂತನೆಗಳನ್ನು ಅಭಿವ್ಯಕ್ತ ಪಡಿಸಲು ಮುಕ್ತ ಅವಕಾಶ ನೀಡಲಾಗಿದೆ. ಕಲಾ ಶಿಕ್ಷಣದಲ್ಲಿ (ಕ್ಷೇತ್ರ) ಹೊಸ ಆಯಾಮ ಮತ್ತು ಚಿಂತನೆಗಳನ್ನು ಕಂಡುಕೊಳ್ಳಲು ನೆರವಾಗುತ್ತದೆ ಎಂಬುದರಲ್ಲಿ ಸಂಶಯವಿಲ್ಲ. ಚಿತ್ರಕಲೆಯು ಎಲ್ಲರಿಗೂ ಅಭಿವ್ಯಕ್ತಿ ಮಾಧ್ಯಮವಾಗಿದೆ. ತಮಗೆ ಅರಿವಿಲ್ಲದಂತೆಯೇ ಕಲಿಯಲು ಪ್ರಾರಂಭಿಸುತ್ತಾರೆ. ಈ ಪಠ್ಯ ವಸ್ತುವಿನಲ್ಲಿ ಹಲವಾರು ಉತ್ತಮ ಅಂಶಗಳನ್ನು ವಿದ್ಯಾರ್ಥಿಗಳಿಗೆ ಮನದಟ್ಟಾಗುವಂತೆ ಕಲಿಸುವ ರೀತಿ ಕಲಾಶಿಕ್ಷಣಕ್ಕೆ ಅವರನ್ನು ಒಳಗೊಳ್ಳುವಿಕೆಗೆ ಚಿತ್ರಕಲಾ ಶಿಕ್ಷಕರ ಪರಿಶ್ರಮ ಅಗತ್ಯ.

ಶಿಕ್ಷಕರು ತಮ್ಮ ವೈಯಕ್ತಿಕ ಪ್ರತಿಭೆಯನ್ನು ಸಹ ಧಾರೆ ಎರೆದು ಈ ಪಠ್ಯವಸ್ತುವಿನಲ್ಲಿರುವ ವಿಷಯವನ್ನು ಸಮರ್ಪಕವಾಗಿ ಬೋಧಿಸಿದಲ್ಲಿ ಶ್ರಮ ಸಾರ್ಥಕವಾಗುತ್ತದೆ ಎಂದು ನಮ್ಮ ಭಾವನೆ.

ನಿರ್ದೇಶಕರು
ಡಿ.ಎಸ್.ಇ.ಆರ್.ಟಿ.
ಬೆಂಗಳೂರು

# ಚಿತ್ರಕಲಾ ಶಿಕ್ಷಣದ ಸಹಪಠ್ಯವಸ್ತು NCF – 2005 ಆಧಾರಿತ
## ರಚನಾ ಸಮಿತಿ

### ಅಧ್ಯಕ್ಷರು

**ಶ್ರೀ ಈಶ್ವರ್ ಎನ್. ಜೋಶಿ**
ಕಲಾವಿದರು,
(ನಿವೃತ್ತ ಚಿತ್ರಕಲಾ ಹಿರಿಯ ವಿಷಯ ಪರಿವೀಕ್ಷಕರು ಬೆಂಗಳೂರು ವಿಭಾಗ)
# 51, 'ರಂಗೋಲಿ' ಶಕ್ತಿನಗರ, ಗೋಕುಲ ರಸ್ತೆ,
ಹುಬ್ಬಳ್ಳಿ – 580 030

### ಸದಸ್ಯರು:

1) **ಶ್ರೀ ಎಸ್. ಶ್ರೀಪತಿ**
**ಚಿತ್ರಕಲಾ ಶಿಕ್ಷಕರು**
ಎಚ್.ಎ.ಎಲ್ ಬೆಂಗಳೂರು

2) **ಶ್ರೀ ಬಿ.ಎಂ.ಎಸ್. ವೃಷಭೇಂದ್ರಸ್ವಾಮಿ**
**ಚಿತ್ರಕಲಾ ಶಿಕ್ಷಕರು**
ಮುದ್ದಾಪುರ – ಚಿತ್ರದುರ್ಗ

3) **ಶ್ರೀ ಎಂ.ಎ. ಕಂಠಿ**
ಚಿತ್ರಕಲಾ ಹಿರಿಯ ವಿಷಯ ಪರಿವೀಕ್ಷಕರು
ಬೆಂಗಳೂರು ವಿಭಾಗ

4) **ಶ್ರೀ ಎಂ. ರಾಮಚಂದ್ರರಾವ್**
**ಚಿತ್ರಕಲಾ ಶಿಕ್ಷಕರು**
ಚಾಮರಾಜಪೇಟೆ, ಬೆಂಗಳೂರು.

5) **ಶ್ರೀ ಜಿ.ಎಂ. ಜಂಗಿ**
**ಕಲಾವಿದರು**
ಡಿ.ಎಸ್.ಇ.ಆರ್.ಟಿ., ಬೆಂಗಳೂರು

---

**ಪರಿಶೀಲನೆ**
**ಶ್ರೀವಿ. ರಂಗಪ್ಪಯ್ಯಹೊಳ್ಳ**
ನಿವೃತ್ತ ಶಿಕ್ಷಕರು, ಸಾಲಿಗ್ರಾಮ ಉಡುಪಿ

**ತಾಂತ್ರಿಕ ಸಹಾಯಕರು**
**ವೈ.ಬಿ. ವೆಂಕಟೇಶ್**
ಡಿ.ಎಸ್.ಇ.ಆರ್.ಟಿ. ಬೆಂಗಳೂರು

**ಸಂಯೋಜಕರು**
**ಶ್ರೀಮತಿ ಉಷಾ ಬಿ. ಗಂಜಿಗಟ್ಟಿ**
ಡಿ.ಎಸ್.ಇ.ಆರ್.ಟಿ. ಬೆಂಗಳೂರು

**ಮಾರ್ಗದರ್ಶನ**

**ಶ್ರೀ ಎಂ.ಎನ್. ಬೇಗ್**
**ನಿರ್ದೇಶಕರು**
ಡಿ.ಎಸ್.ಇ.ಆರ್.ಟಿ. ಬೆಂಗಳೂರು

**ಶ್ರೀ ದೇವಪ್ರಕಾಶ್**
ಸಹನಿರ್ದೇಶಕರು
ಡಿ.ಎಸ್.ಇ.ಆರ್.ಟಿ. ಬೆಂಗಳೂರು

**ಶ್ರೀ ಎನ್ ಲಕ್ಷ್ಮೀನರಸಿಂಹಾಚಾರ್**
ಉಪನಿರ್ದೇಶಕರು
ಡಿ.ಎಸ್.ಇ.ಆರ್.ಟಿ. ಬೆಂಗಳೂರು

# ಚಿತ್ರಕಲಾ ಶಿಕ್ಷಣದ ಪರಿಷ್ಕೃತ ಸಹಪಠ್ಯವಸ್ತು NCF–2005 ಆಧಾರಿತ
# ರಚನಾ ಸಮಿತಿ

## ಅಧ್ಯಕ್ಷರು

**ಶ್ರೀ ಈಶ್ವರ್ ಎನ್. ಜೋಶಿ**
ಕಲಾವಿದರು,
(ನಿವೃತ್ತ ಚಿತ್ರಕಲಾ ಹಿರಿಯ ವಿಷಯ ಪರಿವೀಕ್ಷಕರು ಬೆಂಗಳೂರು ವಿಭಾಗ)
# 51, 'ರಂಗೋಲಿ' ಶಕ್ತಿನಗರ, ಗೋಕುಲ ರಸ್ತೆ,
ಹುಬ್ಬಳ್ಳಿ – 580 030

1) **ಸದಸ್ಯರು**
**ಶ್ರೀ ಎಂ.ಎ. ಕಂಠಿ**
ಚಿತ್ರಕಲಾ ಹಿರಿಯ ವಿಷಯ ಪರಿವೀಕ್ಷಕರು
ಬೆಂಗಳೂರು ವಿಭಾಗ

2) **ಸದಸ್ಯರು**
**ಶ್ರೀ ಎಂ. ರಾಮಚಂದ್ರರಾವ್**
**ಚಿತ್ರಕಲಾ ಶಿಕ್ಷಕರು**
ಚಾಮರಾಜಪೇಟೆ, ಬೆಂಗಳೂರು.

3) **ಸದಸ್ಯರು**
**ಶ್ರೀ ಬಿ.ಎಂ.ಎಸ್. ವೃಷಭೇಂದ್ರಸ್ವಾಮಿ**
**ಚಿತ್ರಕಲಾ ಶಿಕ್ಷಕರು**
ಮುದ್ದಾಪುರ – ಚಿತ್ರದುರ್ಗ

4) **ಸದಸ್ಯರು**
**ಶ್ರೀ ಜಿ.ಎಂ. ಜಂಗಿ**
**ಕಲಾವಿದರು**
ಡಿ.ಎಸ್.ಇ.ಆರ್.ಟಿ., ಬೆಂಗಳೂರು

5) **ತಾಂತ್ರಿಕ ಸಹಾಯಕರು**
**ಶ್ರೀ. ವಾಸುದೇವ್ ಮೂರ್ತಿ**
ಡಿ.ಎಸ್.ಇ.ಆರ್.ಟಿ. ಬೆಂಗಳೂರು

6) **ಸಂಯೋಜಕರು**
**ಶ್ರೀಮತಿ. ನಾಗಮಣಿ ಸಿ.**
**ಹಿರಿಯ ಸಹಾಯಕ ನಿರ್ದೇಶಕರು**
ಡಿ.ಎಸ್.ಇ.ಆರ್.ಟಿ. ಬೆಂಗಳೂರು

---

## ಮಾರ್ಗದರ್ಶನ

**ಶ್ರೀ ಹೆಚ್.ಎಸ್. ರಾಮರಾವ್**
**ನಿರ್ದೇಶಕರು**
ಡಿ.ಎಸ್.ಇ.ಆರ್.ಟಿ. ಬೆಂಗಳೂರು

**ಶ್ರೀಮತಿ. ಐ. ಯಶೋಧ ಬೋಪಣ್ಣ**
ಸಹ ನಿರ್ದೇಶಕರು
ಡಿ.ಎಸ್.ಇ.ಆರ್.ಟಿ. ಬೆಂಗಳೂರು

**ಶ್ರೀಮತಿ. ಫಾಮೀದ ರಹೀಂ**
ಉಪನಿರ್ದೇಶಕರು
ಡಿ.ಎಸ್.ಇ.ಆರ್.ಟಿ. ಬೆಂಗಳೂರು

# ಪಠ್ಯವಸ್ತುವಿನ ಲಕ್ಷಣಗಳು

1. ಎನ್.ಸಿ.ಎಫ್. 2005ರ ಮಾರ್ಗಸೂಚಿಯನ್ನು ಗಮನದಲ್ಲಿರಿಸಿಕೊಂಡು ಸಹಪಠ್ಯ ವಿಷಯಗಳಿಗೆ ಸಂಬಧಿಸಿದ ಈ ಪಠ್ಯವಸ್ತುವನ್ನು ರಚಿಸಲಾಗಿದೆ.
2. ರಾಷ್ಟ್ರೀಯ ಶಿಕ್ಷಣ ನೀತಿ 1986 ಹಾಗೂ ಯಶಪಾಲ್ ಸಮಿತಿಯ ವರದಿಯಲ್ಲಿ (1995) ಸೂಚಿಸಿರುವ ಮಕ್ಕಳ ಸರ್ವತೋಮುಖ ವ್ಯಕ್ತಿತ್ವ ವಿಕಾಸಕ್ಕೆ ಅಗತ್ಯವಾದ ಕೇಂದ್ರ ತತ್ವಗಳನ್ನಾಧರಿಸಿ ಶಿಶುಕೇಂದ್ರೀಕೃತವಾಗಿರುವಂತೆ ರಚಿಸಲಾಗಿದೆ.
3. ಮಕ್ಕಳಲ್ಲಿ ಕಲಿಕೆಯ ಸಾಮರ್ಥ್ಯವನ್ನು ಹೆಚ್ಚಿಸಲು ಬೇಕಾದ ಅನುಭವಗಳನ್ನು ಚಟುವಟಿಕೆಗಳ ಮೂಲಕ ನೀಡುವಂತೆ ರೂಪಿಸಲಾಗಿದೆ.
4. ಕಲೆ ಮತ್ತು ಸೃಜನಾತ್ಮಕ ಚಿಂತನೆಯನ್ನು ಪ್ರಚೋದಿಸುವ ಅಭಿವ್ಯಕ್ತಿಗೆ ಒತ್ತು ಕೊಡಲಾಗಿದೆ.
5. ಶೈಕ್ಷಣಿಕ ಕ್ಷೇತ್ರದ ಸಂಶೋಧನೆ ಪ್ರಯೋಗ ಹಾಗೂ ನಾವಿನ್ಯಗಳನ್ನು ಅಳವಡಿಸಿಕೊಳ್ಳಲು ಶಿಕ್ಷಕರಿಗೆ ಅವಕಾಶ ಕಲ್ಪಿಸಲಾಗಿದೆ.
6. ಗ್ರಾಮಾಂತರ ಹಾಗೂ ನಗರ ಪ್ರದೇಶಗಳ ಮಕ್ಕಳ ಮನೋವಿಕಾಸಕ್ಕೆ ಸಮಾನ ಪ್ರಾತಿನಿಧ್ಯ ನೀಡಲಾಗಿದೆ.
7. ಕಲಿಕೆಯ ಕನಿಷ್ಠ ಮಟ್ಟ ತಲುಪಲು ಹಾಗೂ ಸಹಪಠ್ಯಕ್ಕೆ ಸಂಬಂಧಿಸಿದ ಪ್ರಸಕ್ತ ಪಠ್ಯಸ್ತುವಿನಲ್ಲಿ ಇರುವ ಕೊರತೆಯನ್ನು ನಿವಾರಿಸಲು ಪ್ರಯತ್ನಿಸಲಾಗಿದೆ.
8. ಪಠ್ಯವಿಷಯಗಳಿಗೆ ಪೂರಕವಾಗಿರುವಾಂತೆ ರಚಿಸಲಾಗಿದೆ.
9. ಮಕ್ಕಳ ವಯೋಮಾನ ಮತ್ತು ಮಾನಸಿಕ ಗುಣಮಟ್ಟವನ್ನಾಧರಿಸಿ ಕಲಿಕಾಂಶಗಳನ್ನು ಶಾಸ್ತ್ರ ಹಾಗೂ ಪ್ರಾಯೋಗಿಕ ಎಂಬ ಎರಡು ವಿಭಾಗಗಳಾಗಿ ವಿಂಗಡಿಸಲಾಗಿದೆ.

# ಪ್ರಸ್ತಾವನೆ

ಶಿಕ್ಷಣದ ಮುಖ್ಯವಾಹಿನಿಯ ಲಲಿತಕಲಾ ವಿಭಾಗದಲ್ಲಿ ಚಿತ್ರಕಲಾ ಶಿಕ್ಷಣವನ್ನು ವಿದ್ಯಾರ್ಥಿಗಳ ಬೌದ್ಧಿಕ ಜ್ಞಾನಸಂಪಾದನೆ ಹಾಗೂ ಸರ್ವತೋಮುಖ ಅಭಿವೃದ್ಧಿಗಾಗಿ ಅಳವಡಿಸಿರುವುದು ಸ್ತುತ್ಯಾರ್ಹವಾಗಿದೆ.

ಇಲ್ಲಿ ನೀಡಿರುವ ವಿಷಯವು ಶಿಕ್ಷಕರಿಗೆ ಮಾರ್ಗದರ್ಶಿಯೇ ವಿನಾ ಪಠ್ಯಪುಸ್ತಕವಲ್ಲ. ನೀಡಿರುವ ವಿಷಯಗಳಿಗನುಗುಣವಾಗಿ ಶಿಕ್ಷಕರು ತಮ್ಮ ಸಾಮರ್ಥ್ಯದ ನೆಲೆಯಲ್ಲಿ ವಿದ್ಯಾರ್ಥಿಗಳ ವಯೋಮಾನಕ್ಕನುಗುಣವಾಗಿ ಬೋಧಿಸಬೇಕು, ವಿದ್ಯಾರ್ಥಿಗಳಲ್ಲಿರುವ ಸುಪ್ತ ಪ್ರತಿಭೆಯನ್ನು ಉದ್ದೀಪನಗೊಳಿಸಿ ಸೂಕ್ತ ಮಾರ್ಗದರ್ಶನ, ಪ್ರಾತ್ಯಕ್ಷಿಕೆ ವೀಕ್ಷಣೆಯ ಮೂಲಕ ಚಿಂತನೆಯ ದಿಸೆಯಲ್ಲಿ ವಿದ್ಯಾರ್ಥಿಗಳಿಗೆ ಕಲಾಶಿಕ್ಷಣವನ್ನು ಪ್ರಚಾರಪಡಿಸುವ ಜವಾಬ್ದಾರಿಯನ್ನು ನಿರ್ವಹಿಸಬೇಕು.

ಒಂದನೆಯ ತರಗತಿಯಿಂದ ಹತ್ತನೆಯ ತರಗತಿಯವರೆಗೂ ನೀಡಿರುವ ಪಠ್ಯ ವಿಷಯದೊಂದಿಗೆ ಸನ್ನಿವೇಶವನ್ನು ಕಲಾಶಿಕ್ಷಣವು ಸಮರ್ಥವಾಗಿ ನಿಭಾಯಿಸುತ್ತದೆ.

ಮಕ್ಕಳ ವಯೋಮಿತಿಗನುಗುಣವಾಗಿ, ಪ್ರತಿಯೊಬ್ಬ ವಿದ್ಯಾರ್ಥಿಗಳ ಸಾಮರ್ಥ್ಯದ ಬಗ್ಗೆಯೂ ಶಿಕ್ಷಕರು ಯೋಚಿಸಿ ವಿಷಯವನ್ನು ಬೋಧಿಸುವ ಚಾಕಚಕ್ಯತೆಯನ್ನು ಗಳಿಸಿಕೊಂಡಿರಬೇಕು.

ಪ್ರಾಥಮಿಕ ಹಂತದಲ್ಲಿ ನೀಡಿರುವ ಗುರಿಗಳನ್ನು ಸಾಧಿಸುವ ದಿಶೆಯಲ್ಲಿ ವಿದ್ಯಾರ್ಥಿಗಳಿಗೆ ಮುಕ್ತ ಚಿಂತನೆ, ಕೃತಿಗಳ ರಚನೆಗೆ ಸ್ವಾತಂತ್ರ್ಯವನ್ನು ನೀಡಬೇಕು. ಆತ್ಮಾನಂದ, ಸೌಂದರ್ಯಾನುಭವ, ಅನ್ವೇಷಣೆ, ವಿಮರ್ಶಾತ್ಮಕ ಕ್ರಿಯೆಗಳಿಗೆ ವಿದ್ಯಾರ್ಥಿಗಳು ತಮ್ಮನ್ನು ತಾವು ಸಂಪೂರ್ಣ ತೊಡೊಗಿಸಿಕೊಂಡು, ಜ್ಞಾನಾರ್ಜನೆಯಲ್ಲಿ ಯಶಸ್ವಿಯಾಗಲು ಶಿಕ್ಷಕರು ಅವಕಾಶ ನೀಡಬೇಕು ಮತ್ತು ವಿದ್ಯಾರ್ಥಿಗಳ ಕೃತಿಗಳನ್ನು ಪ್ರೋತ್ಸಾಹಿಸಬೇಕು.

ಚಿತ್ರಕಲಾ ಶಿಕ್ಷಣದ ಚಟುವಟಿಕೆಯಲ್ಲಿ ಉಪಕರಣಗಳ ಬಳಕೆ, ಜ್ಞಾನಾರ್ಜನೆಯ ಸಮಯದಲ್ಲಿ ಪ್ರಾತ್ಯಕ್ಷಿಕೆಗಳ ರೂಪದಲ್ಲಿ ಸಲಹೆ, ಮಾರ್ಗದರ್ಶನವನ್ನು ಶಿಕ್ಷಕರು ನೀಡಬೇಕು. ವಿದ್ಯಾರ್ಥಿಗಳು ಪಂಚೇಂದ್ರಿಯಗಳಿಂದ ಸ್ವೀಕರಿಸಬಹುದಾದ ಎಲ್ಲಾ ಜ್ಞಾನಗಳಿಗೆ ಬೇಕಾಗುವ ವಿಷಯಗಳನ್ನು ಇಲ್ಲಿ ನೀಡಲಾಗಿದೆ.

- ಕಲೆ ಮತ್ತು ಕರಕುಶಲಗಳನ್ನು ಸಂಯೋಜಿಸುವುದಕ್ಕೆ ಬೇಕಾದ ಸಂಪನ್ಮೂಲಗಳು ಎಲ್ಲ ಶಾಲೆಗಳಲ್ಲಿ ದೊರಕಬೇಕು.
- ಕಲಿಕೆಯು "ಒತ್ತಡ"ವಾಗಬಾರದು, ವ್ಯಕ್ತಿ "ಕಲಾವಿಹೀನನೂ" ಆಗಬಾರದು.

ಜ್ಞಾನೇಂದ್ರಿಯಗಳ ಬೆಳವಣಿಗೆ, ಆತ್ಮಸ್ಥೈರ್ಯ, ಅನ್ವೇಷಣೆ, ಪ್ರದರ್ಶನ, ಗುಣಗಳನ್ನು ವಿಫುಲವಾಗಿ ಬೆಳೆಸಿಕೊಳ್ಳಲು ಸಹಕಾರಿಯಾದ ವಿಷಯಗಳನ್ನು ಹೇಗೆ ಬೋಧಿಸಬೇಕು? ಎಂಬುದು ಶಿಕ್ಷಕರ ಸಮರ್ಪಣಾ ಭಾವದ ಮೇಲೆ ನಿಂತಿದೆ.

## ಪರಿವಿಡಿ


| ಕ್ರ ಸಂ | ಚಿತ್ರಕಲಾ ಪಠ್ಯವಸ್ತು | ಪುಟ ಸಂಖ್ಯೆ |
|---|---|---|
| 1. | 1 ನೇ ತರಗತಿ | 05 |
| 2. | 2 ನೇ ತರಗತಿ | 09 |
| 3. | 3 ನೇ ತರಗತಿ | 14 |
| 4. | 4 ನೇ ತರಗತಿ | 18 |
| 5. | 5 ನೇ ತರಗತಿ | 22 |
| 6. | 6 ನೇ ತರಗತಿ | 27 |
| 7. | 7 ನೇ ತರಗತಿ | 31 |
| 8. | 8 ನೇ ತರಗತಿ | 38 |
| 9. | 9 ನೇ ತರಗತಿ | 44 |
| 10 | 10 ನೇ ತರಗತಿ | 50 |